# All India Radio: Bangalore
# National Bulletin In Kannada
# 12.09.2024 19.35 p.m.
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ತರಂಗ್ ಶಕ್ತಿ ಸಮರಾಭ್ಯಾಸ: ಪಾಲುದಾರಿಕೆ ಬಲಿಷ್ಠಗೊಳಿಸಲು ಮಿತ್ರ ರಾಷ್ಟ್ರಗಳಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕರೆ
- ಬಯೋ-ಇಂಡಿಯಾ ೨೦೨೪ ಸಮಾವೇಶ; ಜೈವಿಕ ತಂತ್ರಜ್ಞಾನ ಆಧಾರಿತ ಜೈವಿಕ ಕ್ರಾಂತಿಗೆ ಭಾರತ ನಾಂದಿ: ಸಚಿವ ಡಾ. ಜಿತೇಂದ್ರ ಸಿಂಗ್
- ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಭಾರತೀಯ ಕ್ರೀಡಾಪಟುಗಳೊಂದಿಗೆ ಪ್ರಧಾನಿ ಸಂವಾದ
- ಏಷ್ಯನ್ ಹಾಕಿ ಚಾಂಪಿಯನ್‌ಶಿಪ್: ಕೊರಿಯಾ ವಿರುದ್ಧ ಭಾರತಕ್ಕೆ ಭರ್ಜರಿ ಜಯ
- ಹತ್ತೊಂಬತ್ತು ವರ್ಷದೊಳಗಿನ ಮಹಿಳಾ ಟಿ-೨೦ ಏಷ್ಯಾ ಕಪ್ ಆರಂಭಿಸಲು ಏಷ್ಯನ್ ಕ್ರಿಕೆಟ್ ಮಂಡಳಿ ಅನುಮೋದನೆ

****************

ವಿಕಸನಗೊಳ್ಳುತ್ತಿರುವ ಜಾಗತಿಕ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಪಾಲುದಾರಿಕೆಯನ್ನು ಹೊಸ ಎತ್ತರಕ್ಕೆ ಏರಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಿತ್ರ ರಾಷ್ಟ್ರಗಳಿಗೆ ಕರೆ ನೀಡಿದ್ದಾರೆ.

ರಾಜಸ್ಥಾನದ ಜೋಧ್‌ಪುರ್ ವಾಯುಪಡೆಯ ನಿಲ್ದಾಣದಲ್ಲಿಂದು ಆಯೋಜಿಸಿದ್ದ ತರಂಗ್ ಶಕ್ತಿ ತಾಲೀಮಿನಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ಪರ್ಧೆ ಮತ್ತು ಘರ್ಷಣೆಯ ಜಗತ್ತಿನಲ್ಲಿ ಒಂದಾಗುವುದು ಮತ್ತು ಒಟ್ಟಿಗೆ ಪ್ರಗತಿ ಸಾಧಿಸುವುದು ಭಾರತದ ಗುರಿಯಾಗಿದೆ. ಶಸ್ತ್ರಾಸ್ತ್ರಗಳು ಮತ್ತು ವಿಮಾನಗಳನ್ನು ಸ್ವದೇಶಲ್ಲಿ ಉತ್ಪಾದಿಸುವಲ್ಲಿ ಭಾರತವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಲಘು ಯುದ್ಧ ವಿಮಾನಗಳು, ಸಂವೇದಕಗಳು, ರಾಡಾರ್‌ಗಳು ಮತ್ತು ಎಲೆಕ್ಟ್ರನಿಕ್ ಯುದ್ಧೋಪಕರಣಗಳಂತಹ ಕ್ಷೇತ್ರಗಳಲ್ಲಿ ಭಾರತ ಸ್ವಾವಲಂಬಿಯಾಗುತ್ತಿದೆ ಎಂದು ರಕ್ಷಣಾ ಸಚಿವರು ಹೇಳಿದರು.

ಭಾರತವು ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುತ್ತಿರುವ ಜೊತೆಗೆ ಸುಮಾರು ೯೦ ದೇಶಗಳಿಗೆ ರಕ್ಷಣಾ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ. ತರಂಗ್‌ಶಕ್ತಿ ಸಮರಭ್ಯಾಸವು ದೇಶಗಳ ಸೌಹಾರ್ದತೆಯ ಸಹಕಾರವನ್ನು ಬಲಪಡಿಸುವಲ್ಲಿ ಸಹಕಾರಿಯಾಗಲಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ವಾರ್ತೆಗಳು   ೧೨.೦೯.೨೦೨೪ ೧೯.೩೫   ತರಂಗ್ ಶಕ್ತಿ-೨

ಈ ಸಂದರ್ಭದಲ್ಲಿ ದೇಶದ ಮೂರು ಸೇನಾಪಡೆಗಳ ಮುಖ್ಯಸ್ಥರು ಹಾಗೂ ವಿದೇಶಿ ವಾಯುಪಡೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಸಮರಭ್ಯಾಸದ ಭಾಗವಾಗಿ ಹೆಲಿಕಾಪ್ಟರ್ ಪ್ರಚಂಡ್, ಸಾರಂಗ್, ಸೂರ್ಯಕಿರಣ್ ಹಾಗೂ ಎಲ್‌ಸಿಎ ತೇಜಸ್ ಹೆಲಿಕಾಫ್ಟರ್‌ಗಳು ತಮ್ಮ ಸಾಮರ್ಥ್ಯ ಅನಾವರಣಗೊಳಿಸಿದವು. ಯುದ್ಧ ವಿಮಾನಗಳು ಮತ್ತು ಹೆಲಿಕಾಫ್ಟರ್‌ಗಳ ಹಾರಾಟಕ್ಕೆ ರಕ್ಷಣಾ ಸಚಿವರು ಸಾಕ್ಷಿಯಾದರು.

ಇದೇ ವೇಳೆ ಅವರು, ಎಲ್‌ಎಎಫ್ ಇಂಡಿಯಾ ಡಿಫೆನ್ಸ್ ಏವಿಯೇಷನ್ ಎಕ್ಸ್‌ಪೋಸಿಷನ್ ಐಡಿಎಎಕ್ಸ್ - ೨೪ ಅನ್ನು ಉದ್ಘಾಟಿಸಿದರು.

ಇದೇ ೧೨ರಿಂದ ೧೪ ರವರೆಗೆ ನಿಗದಿಯಾಗಿರುವ ಐಡಿಎಎಕ್ಸ್ ನ ಈ ಆವೃತ್ತಿಯು ವ್ಯಾಪಕ ಶ್ರೇಣಿಯ ಉತ್ಪನ್ನಗಳು ಮತ್ತು ತಂತ್ರಜ್ಞಾನಗಳನ್ನು ಆಯೋಜಿಸುವ ಉದ್ಯಮದಿಂದ ಅಪಾರ ಪಾಲ್ಗೊಳ್ಳುವಿಕೆಯನ್ನು ಎದುರು ನೋಡುತ್ತಿದೆ.

****************

ಭಾರತವು ಜೈವಿಕ ತಂತ್ರಜ್ಞಾನ ಆಧಾರಿತ ಜೈವಿಕ ಕ್ರಾಂತಿಯ ಉತ್ತೇಜನಕ್ಕೆ ನಾಂದಿ ಹಾಡುತ್ತಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ.

ನವದೆಹಲಿಯ ಭಾರತ್ ಮಂಟಪಂನಲ್ಲಿ ಇಂದು ಆಯೋಜಿಸಿದ್ದ ಗ್ಲೋಬಲ್ ಬಯೋ-ಇಂಡಿಯಾ ೨೦೨೪ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಒಂದು ಕಾಲದಲ್ಲಿ ಪಾಶ್ಚಿಮಾತ್ಯ ಜಗತ್ತಿಗೆ ಮಾಹಿತಿ ತಂತ್ರಜ್ಞಾನ ಕ್ರಾಂತಿಯು ಪರಿಣಾಮ ಬೀರಿದಂತೆಯೇ ಜೈವಿಕ ಕ್ರಾಂತಿಯು ಭಾರತದ ಮೇಲೆ ಪರಿಣಾಮ ಬೀರಬಹುದು ಎಂದು ಅಭಿಪ್ರಾಯಪಟ್ಟರು.

ಸಚಿವಾಲಯಗಳು, ರಾಜ್ಯ ಸರ್ಕಾರಗಳು, ಸ್ಟಾರ್ಟ್-ಅಪ್‌ಗಳು, ಸಂಶೋಧಕರು, ಜೈವಿಕ ಕ್ಲಸ್ಟರ್‌ಗಳು, ಹೂಡಿಕೆದಾರರು, ಅಂತಾರಾಷ್ಟ್ರೀಯ ಸಂಸ್ಥೆಗಳು, ನೀತಿ ನಿರೂಪಕರು ಮತ್ತು ಉದ್ಯಮದ ಪ್ರಮುಖರು ಸೇರಿದಂತೆ ವಿವಿಧ ಘಟಕಗಳಿಗೆ ಗ್ಲೋಬಲ್ ಬಯೋ-ಇಂಡಿಯಾ ಸಮಾವೇಶವು, ವ್ಯಾಪಾರ ಜಾಲತಾಣ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದರು.

೩೦ಕ್ಕೂ ಹೆಚ್ಚು ದೇಶಗಳಿಂದ ೫೦೦ಕ್ಕೂ ಹೆಚ್ಚು ಪ್ರದರ್ಶನಗಳೊಂದಿಗೆ, ಈ ಸಮಾವೇಶವು ನವೀನ ಆಲೋಚನೆಗಳು ಮತ್ತು ಪಾಲುದಾರಿಕೆಗಳನ್ನು ಉತ್ತೇಜಿಸಲು ಸಹಕಾರಿಯಾಗಿದೆ ಎಂದು ಡಾ. ಜಿತೇಂದ್ರ ಸಿಂಗ್ ಹೇಳಿದರು.

ಗ್ಲೋಬಲ್ ಬಯೋ-ಇಂಡಿಯಾ ೨೦೨೪, ದೇಶದ ಜೈವಿಕ ತಂತ್ರಜ್ಞಾನದ ಬೆಳವಣಿಗೆ ಮತ್ತು ಅವಕಾಶಗಳನ್ನು ಜಗತ್ತಿಗೆ ಪ್ರದರ್ಶಿಸುವ ಜೈವಿಕ ತಂತ್ರಜ್ಞಾನದ ಮಧ್ಯಸ್ಥಗಾರರ ಪ್ರಮುಖ ಅಂತಾರಾಷ್ಟ್ರೀಯ ಸಮಾವೇಶವಾಗಿದೆ.

****************

ಭಾರತವು ಇಂದು ಒಡಿಶಾ ಕರಾವಳಿಯ ಪರೀಕ್ಷಾ ಕೇಂದ್ರದಿಂದ ಲಂಬ ಉಡಾವಣಾ ಕಿರು ಶ್ರೇಣಿಯ ಮೇಲ್ಮೈಯಿಂದ ಮೇಲ್ಮೈ ವಾಯು ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ.

ಸ್ಥಳೀಯವಾಗಿ ನಿರ್ಮಿಸಲಾದ ಅಲ್ಪ-ಶ್ರೇಣಿಯ ಮೇಲ್ಮೈಯಿಂದ ಮೇಲ್ಮೈ ವಾಯು ಕ್ಷಿಪಣಿಯನ್ನು ಇಂದು ಮಧ್ಯಾಹ್ನ ಒಡಿಶಾದ ಕರಾವಳಿಯ ಬಾಲಸೋರ್ ಜಿಲ್ಲೆಯ ಚಂಡಿಪುರದಲ್ಲಿರುವ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್‌ನ ಲಾಂಚ್‌ಪ್ಯಾಡ್‌ನಿಂದ ಪರೀಕ್ಷಾರ್ಥ ಉಡಾವಣೆ ಮಾಡಲಾಯಿತು.

ಈ ಪರೀಕ್ಷೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆ ಜಂಟಿಯಾಗಿ ನಡೆಸಿವೆ. ಕ್ಷಿಪಣಿ ಪರೀಕ್ಷೆಯು ಎಲ್ಲಾ ಅಗತ್ಯ ಕಾರ್ಯಕ್ಷಮತೆಯ ನಿಯತಾಂಕಗಳನ್ನು ಪೂರೈಸಿವೆ ಎಂದು ವರದಿಯಾಗಿದೆ.

ಈ ಕ್ಷಿಪಣಿಯು, ಕಡಲ ಬೆದರಿಕೆಗಳು ಒಳಗೊಂಡಂತೆ ವಿವಿಧ ವೈಮಾನಿಕ ಬೆದರಿಕೆಗಳನ್ನು ನಿವಾರಿಸಲು ವಿನ್ಯಾಸಗೊಳಿಸಲಾಗಿದೆ.

****************

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಭಾರತೀಯ ಕ್ರೀಡಾಪಟುಗಳೊಂದಿಗೆ ಸಂವಾದ ನಡೆಸಿದರು.

ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ವಿಜೇತರಾದವರು ಮತ್ತು ಭಾಗವಹಿಸಿದವರನ್ನು ಇದೇ ವೇಳೆ ಪ್ರಧಾನಿ ಅಭಿನಂದಿಸಿದರು.

ಪ್ಯಾರಾಲಿಂಪಿಕ್ಸ್‌ನಲ್ಲಿ ಏಳು ಚಿನ್ನ, ಒಂಬತ್ತು ಬೆಳ್ಳಿ ಮತ್ತು ಹದಿಮೂರು ಕಂಚಿನ ಪದಕಗಳನ್ನು ಒಳಗೊಂಡಂತೆ ೨೯ ಪದಕಗಳನ್ನು ಗೆಲ್ಲುವ ಮೂಲಕ ಭಾರತ, ಅತ್ಯುತ್ತಮ ಪ್ರದರ್ಶನ ತೋರಿದೆ.

ಸಂವಾದದಲ್ಲಿ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಮತ್ತು ಭಾರತದ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷ ದೇವೇಂದ್ರ ಜಜಾರಿಯಾ ಉಪಸ್ಥಿತರಿದ್ದರು.

***************

ಸಿಪಿಐಎಂ ಹಿರಿಯ ನಾಯಕ ಸೀತಾರಾಂ ಯೆಚೂರಿ ಇಂದು ನಿಧನ ಹೊಂದಿದ್ದಾರೆ. ೭೨ ವರ್ಷ ವಯಸ್ಸಿನ ಅವರು, ಕಳೆದ ಕೆಲ ದಿನಗಳಿಂದ ನ್ಯೂಮೋನಿಯಾದಿಂದ ಬಳಲುತ್ತಿದ್ದು, ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆದಿದ್ದಾರೆ.

ಸೀತಾರಾಂ ಯೆಚೂರಿ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸೀತಾರಾಂ ಯೆಚೂರಿ ಅವರ ಆಸೆಯಂತೆ ಅವರ ದೇಹವನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ಹಸ್ತಾಂತರಿಸಲಾಗುವುದು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

***************

ಹರಿಯಾಣದಲ್ಲಿ ಏಕ-ಹಂತದ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರನೇ ಮತ್ತು ಅಂತಿಮ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಇಂದು ಸಂಜೆ ಕೊನೆಗೊಂಡಿದೆ. ನಾಳೆ ನಾಮಪತ್ರಗಳ ಪರಿಶೀಲನೆ ನಡೆಯಲಿದೆ.

ಹರಿಯಾಣದಲ್ಲಿ ನಾಮಪತ್ರ ಹಿಂಪಡೆಯಲು ಇದೇ ೧೬ ಕೊನೆಯ ದಿನವಾಗಿದೆ. ೯೦ ಸದಸ್ಯ ಬಲದ ಹರಿಯಾಣ ವಿಧಾನಸಭೆಗೆ ಅಕ್ಟೋಬರ್ ೫ ರಂದು ಮತದಾನ ನಡೆಯಲಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರನೇ ಹಂತದ ನಾಮಪತ್ರಗಳ ಪರಿಶೀಲನೆ ನಾಳೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಇದೇ ೧೭ ಕೊನೆಯ ದಿನವಾಗಿದೆ. ಈ ಹಂತದಲ್ಲಿ ನಲವತ್ತು ವಿಧಾನಸಭಾ ಕ್ಷೇತ್ರಗಳಿಗೆ ಅಕ್ಟೋಬರ್ ೧ ರಂದು ಮತದಾನ ನಡೆಯಲಿದೆ.

****************

ಆಯುಷ್ ಸಚಿವಾಲಯವು ವಿಶೇಷ ಅಭಿಯಾನ ೩.೦ ಅಡಿಯಲ್ಲಿ ಒಂದು ಸಾವಿರದ ೩೦೦ಕ್ಕೂ ಹೆಚ್ಚು ಸಾರ್ವಜನಿಕ ಕುಂದು ಕೊರತೆಗಳನ್ನು ಪರಿಹರಿಸಿದೆ.

ಈ ಅಭಿಯಾನವು ಕೆಲಸದ ಸ್ಥಳದಲ್ಲಿ ಸ್ವಚ್ಛತೆಯನ್ನು ಸುಧಾರಿಸುವ ಮತ್ತು ನಿರ್ವಹಿಸುವ ಗುರಿಯನ್ನು ಹೊಂದಿದೆ ಎಂದು ಸಚಿವಾಲಯ ತಿಳಿಸಿದೆ.

೧೮೭ ಸಾರ್ವಜನಿಕ ಕುಂದುಕೊರತೆಗಳ ಮೇಲ್ಮನವಿಗಳು ಸೇರಿದಂತೆ ವಿವಿಧ ಬಾಕಿ ಇರುವ ಸಮಸ್ಯೆಗಳನ್ನು ವಿಲೇವಾರಿ ಮಾಡಿದೆ.

ಸಚಿವಾಲಯವು ಈಗ ವಿಶೇಷ ಅಭಿಯಾನ ೪.೦ ಗಾಗಿ ಸಜ್ಜಾಗಿದೆ. ಮುಂಬರುವ ಅಭಿಯಾನದ ಅಡಿಯಲ್ಲಿ ಆಯುಷ್ ಸಚಿವಾಲಯವು ತನ್ನ ಎಲ್ಲ ಅಧಿಕಾರಿಗಳಿಗೆ ನಿರ್ವಹಿಸುವ ಪ್ರತಿಜ್ಞೆಯ ಮೂಲಕ ಸ್ವಚ್ಛ ಮತ್ತು ತ್ಯಾಜ್ಯ ಮುಕ್ತ ಭಾರತವನ್ನು ಉತ್ತೇಜಿಸುತ್ತದೆ.

****************

ಚೀನಾದಲ್ಲಿ ನಡೆಯುತ್ತಿರುವ ಏಷ್ಯನ್ ಹಾಕಿ ಚಾಂಪಿಯನ್‌ಶಿಪ್ ಟ್ರೋಫಿಯಲ್ಲಿ ಭಾರತದ ಪುರುಷರ ತಂಡ ೩-೧ ಗೋಲುಗಳ ಅಂತರದಿಂದ ಕೊರಿಯಾ ವಿರುದ್ಧ ಜಯಗಳಿಸಿದೆ. ಈ ಮೂಲಕ ಭಾರತ ಅಜೇಯವಾಗಿ ಉಳಿದಿದೆ. ನಾಯಕ ಹರ್ಮನ್‌ಪ್ರೀತ್ ಸಿಂಗ್ ೨ ಗೋಲು ಗಳಿಸಿದರೆ ಅರೈಜೀತ್ ಸಿಂಗ್ ಹುಂಡಾಲ್ ೧ ಗೋಲು ಗಳಿಸುವ ಮೂಲಕ ಪಂದ್ಯದ ಗೆಲುವಿಗೆ ಕಾರಣರಾದರು.

ನಿನ್ನೆ ನಡೆದ ಮಲೇಷಿಯಾದ ವಿರುದ್ಧದ ಪಂದ್ಯದಲ್ಲಿ ೮-೧ ಗೋಲುಗಳಲ್ಲಿ ಜಯಗಳಿಸಿದ್ದ ಭಾರತ, ಈಗಾಗಲೇ ಸೆಮಿಫೈನಲ್‌ಗೆ ಅರ್ಹತೆ ಗಳಿಸಿದೆ.

****************

ಮಹಿಳೆಯರ ಕ್ರಿಕೆಟ್‌ಗೆ ಉತ್ತೇಜನ ನೀಡುವ ಮಹತ್ವದ ಕ್ರಮವಾಗಿ, ೧೯ ವರ್ಷದೊಳಗಿನ ಮಹಿಳಾ ಟಿ-೨೦ ಏಷ್ಯಾ ಕಪ್ ಆರಂಭಿಸಲು ಏಷ್ಯನ್ ಕ್ರಿಕೆಟ್ ಮಂಡಳಿ ಅನುಮೋದನೆ ನೀಡಿದೆ.

ಮಲೇಷ್ಯಾದ ಕೌಲಾಲಂಪುರದಲ್ಲಿ ನಡೆದ ಏಷ್ಯನ್ ಕ್ರಿಕೆಟ್ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಪ್ರತಿ ಎರಡು ವರ್ಷಗಳಿಗೆ ಒಮ್ಮೆ ೧೯ ವರ್ಷದೊಳಗಿನ ಮಹಿಳೆಯರ ಟಿ-೨೦ ಏಷ್ಯಾ ಕಪ್ ಪಂದ್ಯಾವಳಿ ಆಯೋಜಿಸಲು ತೀರ್ಮಾನಿಸಲಾಗಿದೆ.

****************

ಮುಂಬೈ ಷೇರು ಮಾರುಕಟ್ಟೆಯಲ್ಲಿಂದು ಷೇರು ಸಂವೇದಿ ಸೂಚ್ಯಂಕ-ಸೆನ್ಸೆಕ್ಸ್ ೧ ಸಾವಿರದ ೪೩೯ ಅಂಕಗಳು ಏರಿಕೆಯಾಗಿದ್ದು, ದಿನದ ಅಂತ್ಯಕ್ಕೆ ೮೨ ಸಾವಿರದ ೯೨೬ ಅಂಕಗಳು ದಾಖಲಾಗಿದೆ.

ಇದೇ ವೇಳೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ-ನಿಫ್ಟಿ ೩೯೫ ಅಂಕಗಳು ಏರಿಕೆ ಕಂಡಿದ್ದು, ದಿನದ ಅಂತ್ಯಕ್ಕೆ ೨೫ ಸಾವಿರದ ೩೧೩ ಅಂಕಗಳು ದಾಖಲಾಗಿದೆ.

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿಂದು ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೮೩ ರೂಪಾಯಿ ೯೫ ಪೈಸೆಯಷ್ಟಾಗಿದೆ.

****************

ದೇಶದ ಪೂರ್ವ, ಪಶ್ಚಿಮ, ಈಶಾನ್ಯ ಮತ್ತು ಮಧ್ಯಭಾಗದ ಪ್ರದೇಶಗಳಲ್ಲಿ ಮುಂದಿನ ೪ ದಿನ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂದಿನ ೨೪ ಗಂಟೆಗಳಲ್ಲಿ ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುವ ನಿರೀಕ್ಷೆಯಿದೆ. ಹಾಗೆಯೇ ಬಿಹಾರ, ಒಡಿಶಾ, ಜಾರ್ಖಂಡ್, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರಾದಲ್ಲಿ ನಾಳೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

******** ಮುಕ್ತಾಯ *******